(8) ಲೋಕಸೇವಾ ಆಯೋಗದವರು ಆಯ್ಕೆ ಮಾಡಿರುವ ಗೆಜೆಟೆಡ್ ಪ್ರೋಬೇಷನರ್ಸ್ ಹುದ್ದೆಗಳಿಗೆ ನೇಮಕ ಮಾಡುವುದು.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೇ 1985–86, 86–87ನೇ ಸಾಲಿನ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾಗಿರುವ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳಿಗೆ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆ ನಡೆದು ಮೂರು ವರ್ಷ ಕಳೆದಿದ್ದು ಆಯ್ಕೆ ಪಟ್ಟಿ ಅದಿಕೃತವಾಗಿ ಪ್ರಕಟವಾಗಿ ಐದು ತಿಂಗಳಾಗಿದೆ. ಆದಾಗ್ಯೂ ಸಹ ಸರ್ಕಾರ ನೇಮಕಾತಿ ಕ್ರಮವನ್ನೇನೂ ಜರುಗಿಸಿಲ್ಲ. ಅಭ್ಯರ್ಥಿಗಳು ಬಡ ಕುಟುಂಬದಿಂದ ಬಂದಿದ್ದು ಬಹಳ ಸಂಕಷ್ಟದಲ್ಲಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ಸ್ಪಷ್ಟನೆಯನ್ನು ತಿಳಿಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ, ಸಂಸದೀಯ ವ್ಯವಹಾರಗಳ ಮಂತ್ರಿ): ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಕೆಳಗಿನ ಹೇಳಿಕೆಯನ್ನು ಕೊಡಲು ಇಷ್ಟಪಡುತ್ತೇನೆ.

1986 ಮತ್ತು 1987ನೇ ವರ್ಷಗಳಿಗೆ ಸಂಬಂಧಿಸಿದಂತೆ, ಗೆಜೆಟೆಡ್ ಪ್ರೋಬೇಷನರ್ಸ್ ಆಯ್ಕೆಯಲ್ಲಿ 232 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕರ್ನಾಟಕ ಲೋಕ ಸೇವಾ ಆಯೋಗ ಜುಲೈ 90ರಲ್ಲಿ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಒದಗಿಸಿತು. ಈ ಪಟ್ಟಿಯಲ್ಲಿ ವಿವಿಧ ಇಲಾಖೆಗಳಲ್ಲಿರುವ ವಿವಿಧ ವರ್ಗಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಇರುತ್ತಾರೆ.

ಪ್ರಸ್ತುತದಲ್ಲಿ ಮಿತವ್ಯಯ ಆದೇಶಗಳು ಜಾರಿಯಲ್ಲಿರುವುದರಿಂದ ಇವುಗಳನ್ನು ಸಡಿಲಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಹೀಗೆ ಮಾಡುವಾಗ ಇದೇ ರೀತಿಯ ಬೇರೆ ಆಯ್ಕೆ ಪಟ್ಟಿಗಳೇನಾದರೂ ಆಯೋಗ ಕೊಟ್ಟಿದೆಯೇ ಎನ್ನುವ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ.

ಇನ್ನೊಂದು ಅಂಶವೇನೆಂದರೆ, ಈ ಆಯ್ಕೆ ಪಟ್ಟಿಯ ವಿಷಯದಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಕೆಲವಷ್ಟು ಅರ್ಜಿಗಳಿದ್ದು ಅವುಗಳಲ್ಲಿ ನ್ಯಾಯ ಮಂಡಳಿ ಆ ಅರ್ಜಿದಾರರನ್ನು ಸಹ ಪರಿಗಣಿಸಲು ಸೂಚಿಸಿದೆ.

ಈ ಹಿನ್ನೆಲೆಯಲ್ಲಿ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

(9) ಉಡುಪಿ: ಮಲ್ಪೆ ಪ್ರಾಧಿಕಾರದ ಕಾರ್ಯಚರಣೆಗಳು

ಶ್ರೀಮತಿ ಮನೋರಮ ಮದ್ವರಾಜ್ : ಮಾನ್ಯ ಅಧ್ಯಕ್ಷರೆ, ಉಡುಪಿ–ಮಲ್ಪೆ ಪ್ರಾಧಿಕಾರ ಇದೊಂದು ಪ್ರಾರಬ್ಧದ ಅವಾಂತರದ ಅಧಿಕಾರ ವ್ಯವಸ್ಥೆ ಆಗಿದೆ. ಜನ ಪ್ರತಿನಿಧಿಗಳ ಅಭಿಪ್ರಾಯಪಡೆಯದೆ ತಯಾರಿಸಿದ ಪ್ರಾಧಿಕಾರದ ನೀಲಿನಕ್ಷೆ ಬರೇ ಅಧಿಕಾರಿಗಳ ನಿರ್ಧಾರವಾಗಿದೆ. ಮನಬಂದಂತೆ ಕೈಗಾರಿಕಾವಲಯ, ಹಸಿರು ವಲಯ ಎಂದು ಗುರುತಿಸಲಾಗಿದೆ. ಜನನಿಬಿಡ, ವಾಸದ ಜಾಗಗಳಲ್ಲಿ ಕೈಗಾರಿಕಾ ವಲಯ, ನಮೂದಿಸಿ, ಪ್ರಭಾವಶಾಲಿಗಳು ಮತ್ತು ಕೆಲಸ ಮಾಡಿಕೊಳ್ಳುವ ಮರ್ಮ ಗೊತ್ತಿರುವವರು ಮಾತ್ರ ಪ್ರಯೋಜನ ಪಡೆಯುವಂತಾಗಿದೆ ಎಂದು ಜನ ದೂರುತ್ತಿದ್ದಾರೆ. ಉಡುಪಿ ಪುರಸಭೆ ಮಾತ್ರವಲ್ಲದೆ, ಮಲ್ಪೆ, ಶಿವಳ್ಳಿ, ಉದ್ಯಾವರ, ಪುತ್ತೂರು, ಇತ್ಯಾದಿ ಮಂಡಲ ಪಂಚಾಯತ್ ಕ್ಷೇತ್ರಗಳಲ್ಲಿ ಸಹಾ ಈ ಪ್ರಾಧಿಕಾರದ ವ್ಯಾಪ್ತಿ ಇದ್ದು, ಗ್ರಾಮೀಣ ಪ್ರದೇಶಕ್ಕೂ ತೊಂದರೆ ಆಗಿದೆ. ಮಂಡಲ, ಪುರಸಭೆ, ಪ್ರಾಧಿಕಾರ – ಹೀಗೆ ವಿವಿಧ ಮೂಲಗಳಿಂದ ತೊಂದರೆ ಆಗುವ ಬದಲು ಜನರು ಮಂಡಲಗಳಲ್ಲಿ ಅಥವಾ ಪುರಸಭೆಯಲ್ಲಿ ಒಂದೇ ಕಡೆ ತಮ್ಮ ಕೆಲಸ ಮಾಡಿಕೊಳ್ಳುವ ಏಕ ಕೆಂಡಿ ವ್ಯವಸ್ಥೆ ಆಗಬೇಕು. ಈ ಕುರಿತಾದ ಯೋಜನೆ ಬಹಿರಂಗವಾಗಿ ತಿಳಿಸಲ್ಪಡಬೇಕು. ಉಪದ್ರವಕಾರಿ ವ್ಯವಸ್ಥೆಗಳನ್ನು ವಿಸರ್ಜಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.